**ಓ.ಎಸ್. ನಂಬರ: 6/2021**

**ಡಿ. ಡಬ್ಲ್ಯೂ: 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 03-09-2025)**

**ಪಾಟೀ ಸವಾಲು : ವಾದಿ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ನಿಡಿ-15 ಮತ್ತು 16 ದಾಖಲಾತಿಗಳ ಬಗ್ಗೆ ಮಾಹಿತಿ ಇರುತ್ತದೆ. ನಿಡಿ-15 ಮತ್ತು 16 ರಲ್ಲಿ ದಾವಾ ಸ್ವತ್ತು ಕಂಡುಬರುವುದಿಲ್ಲ. ನಿಡಿ-15 ಮತ್ತು 16 ದಾಖಲಾತಿಗಳನ್ನು ಯಾರು, ಯಾವಾಗ ತಯಾರಿಸಿದರು ಎಂಬ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಿಡಿ-15 ಮತ್ತು 16 ದಾಖಲಾತಿಗಳು ಸಲೀಂ ಮೊಹಮ್ಮದ್ ಜೆಫ್ರಿ ಮತ್ತು ವಾದಿ ಸೊಸೈಟಿಗೆ ಸಂಬಂಧಪಟ್ಟಿರುತ್ತದೆ. ಸದ್ರಿ ದಾಖಲಾತಿಗಳಲ್ಲಿ ಸಲೀಂ ಮೊಹಮ್ಮದ್ ಜೆಫ್ರಿ ಮತ್ತು ವಾದಿ ಸೊಸೈಟಿಯ ಹೆಸರು ಇರುತ್ತದೆ. ಆ ರೀತಿ ನಿಡಿ-15 ಮತ್ತು 16 ದಾಖಲಾತಿಗಳಲ್ಲಿ ಸದ್ರಿಯವರ ಹೆಸರು ಎಲ್ಲಿರುತ್ತದೆ ಎಂದು ತೋರಿಸಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದ್ರಿ ದಾಖಲಾತಿಗಳನ್ನು ನೋಡಿ, ಹೆಸರು ಕಂಡುಬರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಿಡಿ-16 ದಾಖಲೆ ಶೀಲಾಮಡಿಯವರ ಜಾಗಕ್ಕೆ ಸೇರಿದ ದಾಖಲಾತಿಯಾಗಿರುತ್ತದೆ. ಶೀಲಾಮಡಿಯವರಿಗೆ ಸರ್ವೆ ನಂ. 7ಬ ದಲ್ಲಿ 00-04-12 ಜಾಗ ಇರುತ್ತದೆ. ಅದೇ ರೀತಿ ಸದ್ರಿ ಸರ್ವೆ ನಂಬರಿನಲ್ಲಿ 00-02-12 ಜಾಗ ಸಲೀಂ ಮೊಹಮ್ಮದ್ ಜೆಫ್ರಿಯವರಿಗೆ ಸೇರಿರುತ್ತದೆ. ಶೀಲಾಮಡಿಯವರಿಗೆ ಸೇರಿದ ಜಾಗದ ಉತ್ತರಕ್ಕೆ ಸಲೀಂ ಮೊಹಮ್ಮದ್ ಜೆಫ್ರಿಯವರಿಗೆ ಸೇರಿದ 00-02-12 ಜಾಗ ಇರುತ್ತದೆ. ನಿಡಿ-16 ರಲ್ಲಿರುವ ನಕ್ಷೆಯ ಪ್ರಕಾರ ಶೀಲಾಮಡಿಯವರ ಜಾಗದ ಉತ್ತರಕ್ಕೆ ಸರ್ವೆ ನಂ. 7ಅ1 ರ ಜಾಗ ಇರುತ್ತದೆ ಎಂದರೆ ಹೌದು. ಸದ್ರಿ ನಕ್ಷೆಯಲ್ಲಿ ಶೀಲಾಮಡಿಯವರ ಜಾಗದ ಉತ್ತರಕ್ಕೆ ಸರ್ವೆ ನಂ. 7ಬ ಇರುವ ಬಗ್ಗೆ ಕಾಣಿಸಿರುವುದಿಲ್ಲ ಎಂದರೆ, ನಕ್ಷೆಯಲ್ಲಿ ಕಾಣಿಸಿರುವುದಿಲ್ಲ, ಆದರೆ ಜಾಗ ಇರುತ್ತದೆ. ಹಾಗಾದರೆ ನಿಡಿ-16 ನಕ್ಷೆಯ ವಸ್ತುಸ್ಥಿತಿಯಂತೆ ಇರುವುದಿಲ್ಲವೇ ಎಂದರೆ, ಸಾಕ್ಷಿಯು ಹೌದು ಎಂದು ಉತ್ತರಿಸಿ, ನಂತರ ಸ್ವತಃ ಮುಂದುವರೆದು, ನಕ್ಷೆಯ ವಸ್ತುಸ್ಥಿತಿಯಂತೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಡಿ-16 ದಾಖಲೆಯಲ್ಲಿ ಶೀಲಾಮಡಿಯವರ ಜಾಗದಲ್ಲಿ ಏನೇನು ಇದೆ ಎಂಬ ಬಗ್ಗೆ ಕಾಣಿಸಿರುತ್ತಾರೆ ಎಂದರೆ ಹೌದು. ಆ ಪ್ರಕಾರ ಶೀಲಾಮಡಿಯವರ ಜಾಗದಲ್ಲಿ ರಸ್ತೆ ಮತ್ತು ಚರಂಡಿ ಕಾಣಿಸಿರುತ್ತಾರೆ ಎಂದರೆ, ಸಾಕ್ಷಿಯು ಹೌದು ಆದರೆ ರಸ್ತೆ ಮತ್ತು ಚರಂಡಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಹಾಗಾದರೆ ನಿಡಿ-16 ದಾಖಲೆ ವಸ್ತುಸ್ಥಿತಿಯಂತೆ ಇರುವುದಿಲ್ಲ ಎಂದರೆ ಹೌದು. ನಿಡಿ-15 ಮತ್ತು 16 ದಾಖಲಾತಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ಅದು ನ್ಯಾಯಯುತವಾದ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**